ಕಥೆ

ಕೆಲಸ ಮಾಡಿಕೊಂಡು ಬಂದಿರುವ ಸಬ್ ಎಡಿಟರ್ ಪಂಕಜಮ್ಮ ಪತ್ರಿಕೆಯನ್ನು ಹಿಡಿತಕ್ಕೆ ತೆಗೆದುಕೊಂಡಿದ್ದಾಳೆ. ಗಂಡ ಬಿಟ್ಟಿರುವ ಅವಳು ತನ್ನ ಒಬ್ಬಳೇ ಮಗಳಿಗೆ ಮೆರಿಟ್ ಸೀಟ್ ಸಿಕ್ಕಿರುವುದರಿಂದ ಇಂಜಿನಿಯರಿಂಗಿಗೆ ಸೇರಿಸಿದ್ದಾಳೆ. ಸೀಮಿತ ಸಂಬಳದಲ್ಲಿ ಸಂಸಾರ ನಿಭಾಯಿಸುವುದು ಕಷ್ಟವಾದ್ದರಿಂದ ಪತ್ರಿಕೆಯ ಪ್ರಭಾವ ಬಳಿಸಿ ಗುಟ್ಟಾಗಿ ಸರ್ಕಾರಿ ಅಧಿಕಾರಿಗಳಿಂದ, ಸಾಹಿತಿಗಳಿಂದ ಅಷ್ಟಿಷ್ಟು ಗಬರಿಕೊಳ್ಳುತ್ತಾಳೆಂದು ಜನ ಮಾತಾಡಿಕೊಳ್ಳುತ್ತಾರೆ.

ಆ ಪತ್ರಿಕೆಯಲ್ಲಿ ತನ್ನ ಬರಹಗಳು ಪ್ರಕಟವಾದಲ್ಲಿ ಬೇಗ ಪ್ರಸಿದ್ಧಿಗೆ ಬರಬಹುದು ಎಂಬ ಆಸೆಯಿಂದ ಹುಚ್ಚೇಗೌಡ ಬಹಳ ಕಷ್ಟಪಟ್ಟು ಬರೆದು ನಾಲ್ಕಾರು ಲೇಖನಗಳನ್ನು ಒಂದರ ಹಿಂದೊಂದು ಕಳಿಸಿಕೊಟ್ಟು ಪ್ರಕಟವಾಗುತ್ತವೆಂದು ಕಾದುಕಾದು ನಿರಾಶನಾಗಿದ್ದ.

ಅದನ್ನು ಅರಿತ ಅವನ ಗೆಳೆಯ ಕಮ್ ಸಲಹೆಗಾರ ವರದರಾಜ ಅವನ ನೆರವಿಗೆ ಬಂದಿದ್ದ. ಅರ್ಧ ಕ್ವಾರ್ಟರ್ ರಮ್ಮು ಹಾಗೂ ಒಂದು ಪ್ಲೇಟ್ ಪೋರ್ಕ್ ಫ್ರೈ ಕೊಡಿಸಿದರೆ ಅವನ ಎಂಥದ್ದೇ ಸಮಸ್ಯೆಗೂ ಪರಿಹಾರ ಸೂಚಿಸಿಬಿಡುತ್ತಿದ್ದ. ಹಾಗಾಗಿ, ಅವನ ಸಲಹೆಗೆ ಹುಚ್ಚೇಗೌಡನೂ ಕಿವಿ ತೆರೆದುಕೊಳ್ಳುತ್ತಿದ್ದ.

'ಗೌಡ್ರೆ, ಆ ಹೊಸಳ್ಳಿ ಸತೀಶ ಅನ್ನುವವರು ನಿಮ್ಮಹಳೆಯ ಸಹಪಾಠಿ ಎನ್ನುತ್ತೀರಿ. ಅವರಿಗೆ ಜಿಲ್ಲೆಯಲ್ಲೇ ಒಳ್ಳೆಯ ಹೆಸರಿದೆ. ಸಾಹಿತ್ಯ ಕ್ಷೇತ್ರದ ಮೇಲೆ ಒಳ್ಳೆಯ ಹಿಡಿತವಿದೆ. ಅವರ ಸಂಬಂಧ ಕುದುರಿಸಿಕೊಳ್ಳುವುದರಿಂದ ನಿಮ್ಮ ಕಾರ್ಯ ಕೈಗೂಡಬಹುದು. ನೀವು ಬರೆದಿರುವ ಲೇಖನಗಳನ್ನೆಲ್ಲಾ ತೆಗೆದುಕೊಂಡು ನಾಳೆಯೇ ಅವರ ಬಳಿ ಹೋಗಿ. ಹೀಗೀಗೆ ಅಂತ ಹೇಳಿ ಲೇಖನ ಪ್ರಕಟಿಸುವುದಕ್ಕೆ ಪಂಕಜಮ್ಮನಿಗೆ ಒಂದು ಮಾತು ಹೇಳಿಸಿ. ಬೇಕಾದ್ರೆ ಆಕೆಗೆ ಸ್ವಲ್ಪ ದುಡ್ಡು ಕೊಟ್ಟರೂ ಆದೀತು' ಎಂದು ವರದರಾಜ 'ನಕ್ಷತ್ರ' ಹೋಟೆಲಿನಲ್ಲಿ ಕುಳಿತು ಸಲಹೆ ನೀಡಿ ಕಳಿಸಿಕೊಟ್ಟಿದ್ದ.

